ಅ) ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಪ್ರಸಕ್ತ ವರ್ಷದ ಆಕ್ಷನೇ ಪ್ಲಾನ್ ಅನುಮೋದನೆಯಾಗಿದೆಯೇ, ಆಗಿದ್ದರೆ ಯಾವಾಗಿನಿಂದ, ಯಾವ ದಿನಾಂಕದಂದು?

ಆ) ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಕೈಗೊಳ್ಳಲಾಗುವ ಕಾಮಗಾರಿಗಳಿಗೆ ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿರುವ ಒಟ್ಟು ಮೊತ್ತವೆಷ್ಟು? (1.4.95 ರಿಂದ ಆಗಸ್ಟ 1995ರವರೆವಿಗೆ)

ಇ) ಹಾಗೂ ಖರ್ಚು ಮಾಡಿರುವ ಹಣವೆಷ್ಟು?

ಶ್ರೀ ವೈಜನಾಥ ಪಾಟೀಲ (ನಗರಾಭಿವೃದ್ಧಿ,ಕಾಡಾ ಹಾಗೂ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು) :

ಅ) ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ 1995-96ನೇ ಸಾಲಿನ ಕ್ರಿಯಾಯೋಜನೆಗೆ ಸರ್ಕಾರವು 8.9.95ರಂದು ಅನುಮೋದನೆ ನೀಡಿದೆ.

ಆ) 15 ಕೋಟಿ ರೂ.ಗಳು.

ಇ) 393.64 ಲಕ್ಷ ರೂ.ಗಳು.

## ಪುತ್ತೂರು ನಗರ ಸಭೆಯಲ್ಲಿ ಖಾಲಿ ಇರುವ ಹುದ್ದೆಗಳು

2125 - ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ನಗರಾಭಿವೃದ್ಧಿ , ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರು ಪುರಸಭೆಯಲ್ಲಿ ಆರೋಗ್ಯ ತಪಾಸಣಾಧಿಕಾರಿ, ರೆವಿನ್ಯೂ ಇನಸ್ಪೆಕ್ಟರ್ ಹಾಗೂ ಇತರ ಹಲವಾರು ಹುದ್ದೆಗಳು ಬಾಕಿ ಇರುವುದರ ಸರ್ಕಾರದ ಗಮನಕ್ಕೆ ಬಂದಿದೆಯೇ? ಇದ್ದರೆ ಎಷ್ಟು ಹುದ್ದೆಗಳು ಮತ್ತು ಯಾವ್ಯಾವುಗಳು, ಮತ್ತು ಎಷ್ಟು ಸಮಯದಿಂದ ಖಾಲಿ ಇದೆ.

ಆ) ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಪುತ್ತೂರು ಪುರಸಭೆಯಲ್ಲಿ ಒಂದು ಕಂದಾಯ ನಿರೀಕ್ಷಕರ ಹುದ್ದೆ ಹಾಗೂ ಒಂದು ಹಿರಿಯ ಆರೋಗ್ಯ ನಿರೀಕ್ಷಕರ ಹುದ್ದೆಗಳು ಕ್ರಮವಾಗಿ ದಿನಾಂಕ: 29-6-94 ಮತ್ತು 5-6-94ರಿಂದ ಖಾಲಿ ಇರುತ್ತವೆ.

ಆ) ಆದಷ್ಟು ಶೀಘ್ರವಾಗಿ.